ಪ್ರಮಾದದಿಂದಾಗಿ ಪ್ರತಿಷಿದ್ಧ ಕರ್ಮಗಳನ್ನೇನಾದರೂ ಎಸಗಿಬಿಟ್ಟರೆ, ಕೃಚ್ಛ್ರ, ಚಾಂದ್ರಾಯಣ ಮುಂತಾದ ಪ್ರಾಯಶ್ಚಿತ್ತ ಕರ್ಮಗಳಿಂದ ಆ ಪಾಪಗಳನ್ನು ನಿವಾರಿಸಿಕೊಳ್ಳಬಹುದು. ಆದರೆ ಈ ಉಪಾಯಗಳು ಆ ಪಾಪದ ಜ್ವಾಲೆಯನ್ನು ಸ್ವಲ್ಪಮಟ್ಟಿಗೆ ತಗ್ಗಿಸಬಹುದಷ್ಟೆ, ಸಂಪೂರ್ಣ ನಿವಾರಣೆಯನ್ನಂತೂ ಮಾಡಲಾರವು.

### ಮೋಕ್ಷದ ಕಲ್ಪನೆ

ಮೊದಮೊದಲಿಗೆ, ಸರಿಯಾದ ರೀತಿಯಿಂದ ಧರ್ಮವನ್ನು ಸಂಸ್ಥಾಪಿಸುವುದೇ ಪೂರ್ವಮೀಮಾಂಸಾ ದರ್ಶನದ ಗುರಿಯಾಗಿತ್ತು. ಆ ದರ್ಶನದ ಪರಮ ಲಕ್ಷ್ಯವು 'ಸ್ವರ್ಗ'ವನ್ನು ಗಳಿಸಿಕೊಳ್ಳುವುದೇ ಆಗಿತ್ತು. ಆನಂತರದ ದಿನಗಳಲ್ಲಿ ದರ್ಶನದ ಭಾಷ್ಯಕಾರರು ಮೊದಲಿನ ಪರಮೋಚ್ಚ ಲಕ್ಷ್ಯವಾದ ಸ್ವರ್ಗವನ್ನು ಬಿಟ್ಟು 'ಅಪವರ್ಗ' ಅಥವಾ ಮೋಕ್ಷವೇ ಮನುಷ್ಯ ಜೀವನದ ಪರಮ ಪುರುಷಾರ್ಥವೆಂದು ಸ್ವೀಕರಿಸಿದರು. ಕುಮಾರಿಲ ಭಟ್ಟ ಹಾಗೂ ಪ್ರಭಾಕರ ಮಿಶ್ರ ಈ ಇಬ್ಬರು ಭಾಷ್ಯಕಾರರು ಮೋಕ್ಷವನ್ನೇ ಪರಮಪದವೆಂದು ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲದೇ, ನ್ಯಾಯ, ವೈಶೇಷಿಕ ದರ್ಶನಗಳಂತೆಯೇ, ಒಂದಿನಿತೂ ದುಃಖವಿಲ್ಲದಂತಹ ನಿರ್ಲಿಪ್ತಸ್ಥಿತಿಯನ್ನೇ ಮೋಕ್ಷವೆಂದು ಮಾನ್ಯ ಮಾಡಿದ್ದಾರೆ. ಪ್ರಭಾಕರ ಮಿಶ್ರರ ಅಭಿಪ್ರಾಯದಂತೆ ಆತ್ಮವು ಒಂದು ದ್ರವ್ಯವಾಗಿದೆ ಹಾಗೂ ಆ ಆತ್ಮನಲ್ಲಿರುವ ಜ್ಞಾನವು ಅದರ ಗುಣವಾಗಿದೆ. ಆದರೆ ಕುಮಾರಿಲ ಭಟ್ಟರ ಪ್ರಕಾರ ಆತ್ಮವು ದ್ರವ್ಯವಾದರೂ ಜ್ಞಾನವು ಆತ್ಮನ ಸಾಮರ್ಥ್ಯದಿಂದ ಜರುಗುವ ಕ್ರಿಯೆಯೇ ಹೊರತು ಗುಣವಲ್ಲ. ದೇಹ ಹಾಗೂ ಇಂದ್ರಿಯಗಳ ಸಂಯೋಗ ಉಂಟಾದಾಗ, ಇವುಗಳಿಂದ ಬದ್ಧನಾದ ಆತ್ಮನಲ್ಲಿ ವಿಷಯಸಂಸರ್ಗ ಉಂಟಾಗಿ ಜ್ಞಾನ, ಸುಖ, ದುಃಖ, ಇಚ್ಛೆ, ಪ್ರಯತ್ನ ಇತ್ಯಾದಿ ಧರ್ಮಗಳು ಉತ್ಪನ್ನವಾಗುತ್ತವೆ. ಮೋಕ್ಷಾವಸ್ಥೆಯಲ್ಲಿ ದೇಹೇಂದ್ರಿಯವಿಷಯ ಸಂಯೋಗದಿಂದ ವಿಲಯ (ಪ್ರತ್ಯೇಕತೆ) ಏರ್ಪಡುವ ಕಾರಣದಿಂದ ಆತ್ಮನಲ್ಲಿ ಜ್ಞಾನ ಹಾಗೂ ಆನಂದಗಳು ಉತ್ಪನ್ನವಾಗಲಾರವು. ಪ್ರಭಾಕರ ಮಿಶ್ರರು ನ್ಯಾಯದರ್ಶನದ ಅಭಿಪ್ರಾಯದಂತೆ ಆತ್ಮವನ್ನೂ ಸಹ ಜಡದ್ರವ್ಯವೆಂದು ಹೇಳುತ್ತಾರೆ. ಕುಮಾರಿಲ ಭಟ್ಟರು ಆತ್ಮವು ಜಡಬೋಧಾತ್ಮಕ ದ್ರವ್ಯವೆಂದು ಅಭಿಪ್ರಾಯಪಡುತ್ತಾರೆ. ಕುಮಾರಿಲ ಭಟ್ಟರು ಹೇಳುವ ಪ್ರಕಾರ ಮೋಕ್ಷಾವಸ್ಥೆಯಲ್ಲಿ ಆತ್ಮನಿಗೆ ಆನಂದ ಜ್ಞಾನವಿರುವುದಿಲ್ಲ. ಆದರೆ, ಆ ಮೋಕ್ಷಾನುಭವಕಾಲದಲ್ಲಿ ಆತ್ಮನಿಗೆ 'ಇಲ್ಲಿ ಏನೂ ಇಲ್ಲ' ಎಂಬ ಜ್ಞಾನ ಇರುತ್ತದೆ.

### ಕುಮಾರಿಲ ಭಟ್ಟರ ಹಿರಿಮೆ

ಪೂರ್ವಮೀಮಾಂಸಾ ದರ್ಶನವನ್ನು ಸ್ಪಷ್ಟಪಡಿಸಿರುವ ಆಚಾರ್ಯರಲ್ಲಿ ಕುಮಾರಿಲ ಭಟ್ಟರೇ ಮಹತ್ವಪೂರ್ಣ ವ್ಯಕ್ತಿಯೆಂದು, ಅವರ ಈ ದರ್ಶನದ ಕುರಿತಾದ ಮೂರು ಗ್ರಂಥಗಳನ್ನು ಅಧ್ಯಯನ ಮಾಡಿದವರಿಗೆ ಮನವರಿಕೆಯಾಗದೇ ಇರದು. ಅವರು ಬೌದ್ಧಧರ್ಮವನ್ನು ಅಧ್ಯಯನ ಮಾಡಲೆಂದೇ ಆ ಮತವನ್ನು ಸ್ವೀಕರಿಸಿದರು. ಅದನ್ನು ಆಳವಾಗಿ ಅಧ್ಯಯನ ಮಾಡಿ, ಅದರಲ್ಲಿರುವ ದೋಷಗಳನ್ನು ಚೆನ್ನಾಗಿ ಗುರುತಿಸಿಕೊಂಡು, ಪುನಃ ಶುದ್ಧಿ ಸಂಸ್ಕಾರವನ್ನು ಮಾಡಿಸಿಕೊಂಡು ವೈದಿಕ ಧರ್ಮಕ್ಕೆ ಮರಳಿದರು. ಬೌದ್ಧಧರ್ಮವನ್ನು ಪ್ರಬಲವಾಗಿ ಖಂಡಿಸಿ, ಕುಮಾರಿಲ ಭಟ್ಟರು ಭಾರತದೇಶದಲ್ಲಿ ವೈದಿಕ ಧರ್ಮದ ಜೀರ್ಣೋದ್ಧಾರಕ್ಕೆ ಮಹಾನ್ ಕೊಡುಗೆಯನ್ನು ನೀಡಿದ್ದಾರೆ.

ಕುಮಾರಿಲ ಭಟ್ಟರು ಪೂರ್ವಮೀಮಾಂಸಾ ದರ್ಶನದ ಪರಾಕಾಷ್ಠತೆಯನ್ನು ತಲುಪಿದ ಮಹಾನ್ ಪುರುಷರು. ಹಾಗೆಂದೇ ಅವರು ಪೂರ್ವಮೀಮಾಂಸಾ ದರ್ಶನಕ್ಕೆ ಉತ್ತರಮೀಮಾಂಸಾ ದರ್ಶನದ ಸುಸಂಪನ್ನತೆಯು ಅತ್ಯಂತ ಅವಶ್ಯಕ ಎಂಬುದನ್ನು ಮನಗಂಡು, ಈ ಎರಡೂ ದರ್ಶನಗಳ ಮಧ್ಯೆ ಸೇತುವೆಯಾಗಿದ್ದಾರೆ. ಅಷ್ಟೇ ಅಲ್ಲದೆ, ಅತ್ಯಂತ ಶುಷ್ಕ ಕರ್ಮಠತೆ ಹಾಗೂ ಈಶ್ವರ ನಿರಾಕರಣೆಯಂಥ ಅನಿಷ್ಟಗಳಿಂದ ಪೀಡಿತವಾಗಿದ್ದ ಪೂರ್ವಮೀಮಾಂಸಾ ದರ್ಶನವನ್ನು, ಈಶ್ವರತತ್ತ್ವವನ್ನು ಒಪ್ಪಿಕೊಳ್ಳುವುದರ ಮೂಲಕ, ರಸಪೂರ್ಣವಾಗಿಸಿದ್ದಾರೆ. ಹೀಗೆ ಚತುರ್ವೇದಪ್ರಣೀತ ಸನಾತನಧರ್ಮವನ್ನು ಕ್ಷಿತಿಜದವರೆಗೆ ಎತ್ತಿ ಹಿಡಿದಂಥ ಮಹಾನ್ ಮೇಧಾವಿ ಕುಮಾರಿಲ ಭಟ್ಟರು. ಅವರು ಹೀಗೆ ಹೇಳುತ್ತಾರೆ:

**ಶಬ್ದಬ್ರಹ್ಮೇತಿ ಯಚ್ಚೇದಂ ಶಾಸ್ತ್ರಂ ವೇದಾಖ್ಯಮುಚ್ಯತೇ ।**
**ತದಪ್ಯಧಿಷ್ಠಿತಂ ಸರ್ವಮೇಕೇನ ಪರಮಾತ್ಮನಾ ॥**

"ಶಬ್ದಬ್ರಹ್ಮವಾದ ವೇದಶಾಸ್ತ್ರ ಸ್ವತಃ ಪರಮಾತ್ಮನ ಮೂಲಕವೇ ಹೊರಬಂದಿದೆ. ಭಗವಂತನೇ ವೇದದ ಅಧಿಷ್ಠಾನರೂಪನಾಗಿ ಇದ್ದಾನೆ."

ಕುಮಾರಿಲ ಭಟ್ಟರು ತಮ್ಮ ಶ್ಲೋಕವಾರ್ತಿಕ ಗ್ರಂಥದ ಮಂಗಲಾಚರಣ ಶ್ಲೋಕದಲ್ಲಿಯೇ ವೈದಿಕ ಯಜ್ಞಪುರುಷನ ರೂಪದಿಂದ ಭಗವಾನ್ ಶಿವನನ್ನು ಒಪ್ಪಿಕೊಂಡು ಹೃತ್ಪೂರ್ವಕವಾಗಿ ವಂದಿಸುತ್ತಾರೆ. ಅದು ಹೀಗಿದೆ:

**ವಿಶುದ್ಧ ಜ್ಞಾನದೇಹಾಯ ತ್ರಿವೇದಿ ದಿವ್ಯಚಕ್ಷುಷೇ ।**
**ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಃ ಸೋಮಾರ್ಧಧಾರಿಣೇ ॥**

"ಯಾರ ದೇಹವು ವಿಶುದ್ಧಜ್ಞಾನಮಯವಾಗಿದೆಯೋ, ಯಾರ ದಿವ್ಯವಾದ ಮೂರು ನೇತ್ರಗಳು ಮೂರು ವೇದಗಳಾಗಿವೆಯೋ, ಯಾರು ಸೋಮರಸ ಪಾತ್ರೆಯಿಂದ ವಿಭೂಷಿತನಾಗಿದ್ದಾನೆಯೋ, ಯಾರ ಮಸ್ತಕದಲ್ಲಿ ಅರ್ಧಚಂದ್ರನು ಸುಶೋಭಿತನಾಗಿದ್ದಾನೆಯೋ, ಯಾರು ಲೋಕಕಲ್ಯಾಣ ಹಾಗೂ ನಿಃಶ್ರೇಯಸರೂಪೀ ಮೋಕ್ಷಪ್ರಾಪ್ತಿಗೆ ಕಾರಣೀಭೂತನಾಗಿದ್ದಾನೋ ಅಂತಹ ವೈದಿಕ ಯಜ್ಞಪುರುಷರೂಪಿಯಾದ ಭಗವಂತ ಶಿವನಿಗೆ ನಮಿಸುತ್ತೇನೆ."

ತಮ್ಮ ಪ್ರಚಂಡ ವಿದ್ವತ್ತಿನಿಂದ ಸನಾತನ ಧರ್ಮದ ಪುನರುತ್ಥಾನಕ್ಕೆ ಸಹಕರಿಸಿದ ಕುಮಾರಿಲ ಭಟ್ಟರು, ಪೂರ್ವಮೀಮಾಂಸಾ ಹಾಗೂ ಉತ್ತರಮೀಮಾಂಸಾ – ಈ ಎರಡೂ ದರ್ಶನಗಳು ಒಂದೇ ಶಾಸ್ತ್ರದ ಎರಡು ಭಾಗಗಳು, ಒಬ್ಬನೇ ಮನುಷ್ಯನ ಎರಡು ಕಣ್ಣುಗಳಿದ್ದಂತೆ ಎಂದು ಅಭಿಪ್ರಾಯಪಡುತ್ತಾರೆ. ಇನ್ನೂ ಹೇಳಬೇಕೆಂದರೆ ಪೂರ್ವಮೀಮಾಂಸಾ ದರ್ಶನವೆಲ್ಲವೂ ತನ್ನ ರಸಭರಿತ ಫಲಗಳನ್ನು ಉತ್ತರಮೀಮಾಂಸಾ ದರ್ಶನದ ಗರ್ಭದಲ್ಲಿಟ್ಟುಕೊಂಡಿದೆ ಎನ್ನುವುದೇ ಕುಮಾರಿಲ ಭಟ್ಟರ ಹೃದಯದ ಭಾವನೆ ಎಂದು ಹೇಳಲು ಅಡ್ಡಿಯಿಲ್ಲ.

**ನಮೋ ಪರಮಋಷಿಭ್ಯೋ, ನಮಃ ಪರಮಋಷಿಭ್ಯಃ**

# ಪರಿಪೂರ್ಣ ಭಕ್ತರಾಗಿ ಸ್ವಾಮಿ ವಿವೇಕಾನಂದರು

ಸ್ವಾಮಿ ಭಜನಾನಂದ

(ಹಿಂದಿನ ಸಂಚಿಕೆಯಿಂದ)

### ಮೌಲ್ಯಗಳ ಪುನರ್ಮೌಲ್ಯಮಾಪನ

ಭಕ್ತನ ಪ್ರಜ್ಞೆಯ ಪರಿವರ್ತನೆಯ ಅಂಶವನ್ನು ಚರ್ಚಿಸಿದ ಅನಂತರ ಸ್ವಾಮೀಜಿ, 'ಪ್ರೇಮತ್ರಿಕೋನ'ವೆಂಬ ಪ್ರಸಿದ್ಧ ನಿದರ್ಶನವನ್ನು ವಿವರಿಸಿ ಹೇಳುತ್ತಾರೆ. ಈ ತ್ರಿಕೋನವು ನಿಜವಾಗಿ ಮೌಲ್ಯಗಳ ತ್ರಿಕೋನವೇ ಆಗಿದೆ. ಭಕ್ತನು ಭಗವಂತನನ್ನು ಸಮೀಪಿಸಿದ ಹಾಗೆಲ್ಲ, ಆತನಲ್ಲಿ ಭಗವದ್ಭಕ್ತಿಯು ಹೆಚ್ಚಾಗುತ್ತ ಹೋಗುತ್ತದೆ; ಆಗ ಅವನು ಮೌಲ್ಯಗಳ ಬಗ್ಗೆ ತನ್ನ ಪರಿಕಲ್ಪನೆಯೂ ತೀವ್ರಗತಿಯಲ್ಲಿ ಪರಿವರ್ತನೆಗೊಳ್ಳುವುದನ್ನು ಕಂಡುಕೊಳ್ಳುತ್ತಾನೆ. ಇದುವರೆಗೆ ಯಾವುದನ್ನು ಶ್ರೇಷ್ಠವೆಂದು ಮತ್ತು ಅತ್ಯಂತ ಪ್ರಿಯತಮವೆಂದು ಅವನು ಪರಿಗಣಿಸಿದ್ದನೋ, ನೈಜ ಭಗವತ್ಪ್ರೇಮಕ್ಕೆ ಹೋಲಿಸಿ ನೋಡಿದರೆ ಅದು ಕ್ಷುಲ್ಲಕವೆಂದು ಅವನಿಗೆ ಗೋಚರವಾಗುವುದು. ಅವನ ಇಡೀ ದೃಷ್ಟಿಕೋನ, ಮೌಲ್ಯ ನಿರ್ಧಾರ, ಅನುಭವದ ಮಾಪನ ಮಾರ್ಪಾಡಾಗುವುದು. ಎಲ್ಲ ಮೌಲ್ಯಗಳ ಈ ನೈಜ ಪುನರ್ಮೌಲ್ಯಮಾಪನವು ಎಂತಹ ಉನ್ನತ ಮಟ್ಟದವರೆಗೂ ನಡೆಯುವುದೆಂದರೆ, ಹಿಂದೂತತ್ತ್ವಶಾಸ್ತ್ರದ ಎಲ್ಲ ಶಾಖೆಗಳಲ್ಲಿಯೂ ಪರಮಾರ್ಥವೆಂದು ಬಗೆಯಲಾಗುವ ಮುಕ್ತಿ ಅಥವಾ ಆತ್ಯಂತಿಕ ಬಿಡುಗಡೆ ಕೂಡ ಕೆಳಮಟ್ಟದ್ದೆಂದು ಪರಿಗಣಿತವಾಗುವುದು. ಪರಮಪ್ರೇಮವೊಂದೇ ಪರಮಾರ್ಥವೆಂದು ಕಂಡುಬರುವುದು.

ಎಲ್ಲವನ್ನೂ ಮೀರಿದ ಈ ಪುರುಷಾರ್ಥದ ಸ್ವಭಾವ ಮತ್ತು ಲಕ್ಷಣಗಳೇನು? ಇವನ್ನೇ ಒಂದು ತ್ರಿಕೋನದ ತ್ರಿಭುಜಗಳೆಂಬಂತೆ ಸ್ವಾಮೀಜಿ ಚಿತ್ರಿಸುತ್ತಾರೆ. ಅವುಗಳೆಂದರೆ, **ಪ್ರೀತಿಯಲ್ಲಿ ಯಾವುದೇ ಕೊಡಕೊಳ್ಳುವುದು ಇಲ್ಲ**, **ಪ್ರೀತಿಯಲ್ಲಿ ಭಯವಿಲ್ಲ** ಮತ್ತು **ಸ್ವತಃ ಈ ಪ್ರೇಮವು ಪರಮಾದರ್ಶವಾಗಿದೆ** ಎಂಬುವು. ಈ ಬಗೆಯ ವಿವರಣೆಯನ್ನು ನೀಡುವಾಗ ಸ್ವಾಮೀಜಿ, ಶ್ರೀರಾಮಾನುಜರ ಅಭಿಪ್ರಾಯವನ್ನು ಅನುಸರಿಸುತ್ತಿದ್ದಿರಬಹುದು. ಶ್ರೀರಾಮಾನುಜರು ಭಕ್ತಿಯ ವ್ಯಾಖ್ಯಾನವನ್ನು ಹೀಗೆ ಮಾಡುತ್ತಾರೆ: **ಭಕ್ತಿರಪಿ ನಿರತಿಶಯಪ್ರಿಯ-ಅನನ್ಯಪ್ರಯೋಜನ ಸ್ವೇತರವೈತೃಷ್ಣ್ಯ ಜ್ಞಾನವಿಶೇಷ ಏವ** (ವೇದಾರ್ಥ ಸಂಗ್ರಹ): "ಭಕ್ತಿ ಎಂದರೆ ವಿಶೇಷವಾದ ಜ್ಞಾನ. ಅದು ಪರಿಪೂರ್ಣ ಪ್ರೇಮರೂಪವಾದದ್ದು, ಅದು ಸ್ವತಃ ಪರಮಾರ್ಥದ ಗತಿಯಾಗಿದೆ ಮತ್ತು ಅದರಲ್ಲಿ ಬೇರೆ ಯಾವುದಕ್ಕೂ ತೃಷ್ಣೆಯು ನಿರಾಕರಿಸಲ್ಪಟ್ಟಿದೆ."

### ವಿಶ್ವಾತ್ಮದರ್ಶನ

ತತ್ತ್ವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಯಾವುದನ್ನು ಮೌಲ್ಯವೆಂದು ಕರೆಯುತ್ತಾರೋ ಅದು ಆದರ್ಶಮಾತ್ರವಾಗಿರುವ ಮರೀಚಿಕೆಯೇ ಸರಿ. ಆದರೂ, ಈ ಮರೀಚಿಕೆಯ ಹಿನ್ನೆಲೆಯಲ್ಲಿ ಪರಮಮೌಲ್ಯವೂ ಸತ್-ಚಿತ್-ಆನಂದ ಸ್ವರೂಪವೂ ಆಗಿರುವ ಸತ್ಯವಸ್ತು ಇದೆ. ಈ ಮೂಲಭೂತ ಸತ್ಯತತ್ತ್ವಕ್ಕಾಗಿನ ಅನ್ವೇಷಣೆಯೇ ಹಿಂದೂತತ್ತ್ವಶಾಸ್ತ್ರ ಮತ್ತು ಧರ್ಮಗಳ ರೂಪದಲ್ಲಿ ಮೈದಳೆದಿದೆ. ಇದನ್ನು ಸಗುಣ ಈಶ್ವರನೆಂದಾಗಲಿ ಅಥವಾ ನಿರ್ಗುಣ ಬ್ರಹ್ಮನೆಂದಾಗಲಿ ಪರಿಭಾವಿಸಿಕೊಳ್ಳಬಹುದು. ಭಕ್ತಿಯು ಅವಶ್ಯವಾಗಿ 'ನಾನು-ನೀನು' ಎಂಬ ಸಂಬಂಧವನ್ನು ಒಳಗೊಂಡಿದೆ ಎಂಬ ಸ್ವಾಮಿ ವಿವೇಕಾನಂದರ ಅಭಿಪ್ರಾಯವನ್ನು ನಾವೀಗಾಗಲೇ ನೋಡಿದ್ದೇವೆ. ಅಂತಹ ಸಂಬಂಧವು ಸಗುಣ ಈಶ್ವರನಲ್ಲಿ ಮಾತ್ರವೇ ಸಾಧ್ಯ. ಭಕ್ತಿಸಾಧನೆಯ ಪ್ರಾಥಮಿಕ ಹಂತಗಳಲ್ಲಿ ಈಶ್ವರನು ಒಬ್ಬ ಆದರ್ಶಪುರುಷನಾಗಿ ಅಥವಾ ಮೌಲ್ಯವಾಗಿ ಕಂಡುಬರುತ್ತಾನೆ. ಆದರೆ, ಮೌಲ್ಯಸಂಪಾದನೆಯ ಉನ್ನತ ಹಂತಗಳಲ್ಲಿ ಉತ್ಕಟ ಪ್ರೇಮವು ಈ ಆದರ್ಶವನ್ನು ಸಗುಣ ಈಶ್ವರನ ನೈಜಾನುಭೂತಿಯಾಗಿ ಪರಿವರ್ತಿಸುತ್ತದೆ. ಈ ಬಹುಮುಖ್ಯವಾದ ಪ್ರಕ್ರಿಯೆ ಮೂಡಿಬರುವುದು ಹೇಗೆ ಎಂಬುದನ್ನು ಸ್ವಾಮೀಜಿ ಹೀಗೆ ವಿವರಿಸುತ್ತಾರೆ:

"ಸ್ತ್ರೀಪುರುಷರು ಸಾಮಾನ್ಯವಾಗಿ ಆರಾಧಿಸುವ ಆದರ್ಶವು ಅವರಲ್ಲಿಯೇ ಅಂತರ್ಗತವಾಗಿರುವುದು. ಪ್ರತಿಯೊಬ್ಬನೂ ಅಥವಾ ಪ್ರತಿಯೊಬ್ಬಳೂ ತನ್ನ ಸ್ವಂತ ಆದರ್ಶವನ್ನೇ ಹೊರಗೆ ಆರೋಪಿಸಿ ಅದರ ಮುಂದೆ ಮಂಡಿಯೂರಿ ನಮಸ್ಕರಿಸುತ್ತಾನೆ ಅಥವಾ ಮಣಿಯುತ್ತಿರುತ್ತಾಳೆ... ಒಂದಾದ ಮೇಲೊಂದು ವಿಷಯವನ್ನು ತೆಗೆದುಕೊಂಡು, ನಮ್ಮ ಅಂತರಂಗದಲ್ಲಿ ಇರುವ ಆದರ್ಶವನ್ನೇ ಅದರ ಮೇಲೆ ಆರೋಪಿಸುತ್ತೇವೆ. ಬಾಹ್ಯವಸ್ತುಗಳೆಲ್ಲ ಸದಾಕಾಲವೂ ವಿಸ್ತಾರವಾಗುತ್ತಿರುವ ಈ ಆಂತರಿಕ ಆದರ್ಶವನ್ನು ವ್ಯಕ್ತಗೊಳಿಸಲು ಅಸಮರ್ಪಕವಾದಾಗ ಅವುಗಳನ್ನು ಒಂದಾದ ಮೇಲೊಂದರಂತೆ ತಿರಸ್ಕರಿಸುತ್ತ ಹೋಗುತ್ತೇವೆ. ಕಟ್ಟಕಡೆಗೆ ಸಾಧಕನು ಬಾಹ್ಯವಸ್ತುವಿನಲ್ಲಿ ತನ್ನ ಆದರ್ಶವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಅಸಾಧ್ಯವೆಂದು ಚಿಂತಿಸತೊಡಗುತ್ತಾನೆ....ಕೊನೆಗೆ ಸರ್ವವ್ಯಾಪಿಯೂ ಶ್ರೇಷ್ಠವೂ ಆದ ಅತ್ಯಂತ ಸಾಮಾನ್ಯೀಕರಿಸಿದ ನಿರುಪಾಧಿಕ ಆದರ್ಶವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಶಕ್ತಿಯನ್ನು ಪಡೆದುಕೊಳ್ಳುತ್ತಾನೆ.

"ಆಗ ಆದರ್ಶವೆಂಬುದು ಅವನ ಪಾಲಿಗೆ ಸಚೇತನವಾಗುವುದು, ನೈಜವಾಗುವುದು. ಭಕ್ತನು ಈ ಸ್ಥಿತಿಯನ್ನು ತಲುಪಿದಾಗ, ದೇವರ ಅಸ್ತಿತ್ವವನ್ನು ಸಾಧಿಸಿ ತೋರಿಸಬೇಕೇ ಅಥವಾ ಇಲ್ಲವೆ, ಅಥವಾ ದೇವರು ಸರ್ವಶಕ್ತನೆ, ಸರ್ವವ್ಯಾಪಕನೆ ಎನ್ನುವ ಪ್ರಶ್ನೆಗಳನ್ನು ಕೇಳುವ ನಿರ್ಬಂಧಕ್ಕೆ ಇನ್ನುಮುಂದೆ ಒಳಗಾಗುವುದಿಲ್ಲ. ಭಕ್ತನಿಗೆ ದೇವರು ಪ್ರೇಮೇಶ್ವರ ಮಾತ್ರ; ಆ ದೇವರೇ ಅವನ ಪ್ರೇಮಾದರ್ಶ. ಇದು ಭಕ್ತನ ಎಲ್ಲ ಆವಶ್ಯಕತೆಗಳನ್ನು ಪೂರೈಸುವುದು. ಪ್ರೀತಿಯ ಭಾವನೆಯಂತೆ, ದೇವರು ಕೂಡ ಆಗ ಸ್ವತಃಸಿದ್ಧನಾಗಿರುವನು." (*ಭಕ್ತಿಯೋಗ,* ಪುಟ ೭೩, ೭೪)

ವಿವೇಕಾನಂದರ ಪ್ರಕಾರ ಪ್ರೇಮವೆಂಬುದು ಪರಿಪೂರ್ಣತೆಗಾಗಿನ ಅಂತರ್ಗತ ಅನ್ವೇಷಣೆಯೇ ಆಗಿದೆ. ಈ ಪರಿಪೂರ್ಣತೆಯು ಈಗಾಗಲೇ ನಮ್ಮಲ್ಲಿ ನಿಜವಾಗಿಯೂ ಸುಪ್ತವಾಗಿದೆ; ಅದು ಪರಿಶುದ್ಧ ಚೈತನ್ಯ ಮತ್ತು ಆನಂದಸ್ವರೂಪವಾಗಿರುವ ನಮ್ಮ ಆತ್ಮಕ್ಕಿಂತ ಭಿನ್ನವಾದುದಲ್ಲ. ಆದ್ದರಿಂದ ಕಟ್ಟಕಡೆಯ ವಿಶ್ಲೇಷಣೆಯ ಪ್ರಕಾರ, ಎಲ್ಲ ಪ್ರೇಮವಿಧಾನಗಳು ಕೂಡ ಆತ್ಮಪ್ರೀತಿಯ ಅಭಿವ್ಯಕ್ತಿಗಳೇ ಆಗಿವೆ. ಇದನ್ನೇ ತನ್ನ ಪತ್ನಿ ಮೈತ್ರೇಯಿಗೆ ಉಪನಿಷತ್ತಿನ ಋಷಿ ಯಾಜ್ಞವಲ್ಕ್ಯನು ಬೋಧಿಸಿದ್ದು. ಭಕ್ತನು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿದ ಹಾಗೆಲ್ಲ, ಅವನ ಪ್ರಜ್ಞೆಯೂ, ಅದು ಎಲ್ಲ ಜೀವಿಗಳನ್ನೂ ಆಲಿಂಗಿಸಿಕೊಳ್ಳುವವರೆಗೆ, ಬೆಳೆದು ವಿಕಾಸವಾಗುತ್ತ ಹೋಗುವುದು. ಆಧ್ಯಾತ್ಮಿಕ ಜೀವನದ ಆರಂಭಕಾಲದ ಆದರ್ಶವಾದ ಸಗುಣ ಈಶ್ವರವೆಂಬ ಆದರ್ಶವು ಈಗ ಚೈತನ್ಯದ ಜ್ಯೋತಿ ಮತ್ತು ಆನಂದಗಳಿಂದ ಪರಿಪ್ಲುತವಾಗಿ, ಆ ಭಕ್ತನಿಗೆ ಜೀವಂತಸತ್ಯವಾಗುವುದು. ಸಗುಣ ಈಶ್ವರನೇ ಭಕ್ತನ ನೈಜ ಆತ್ಮವಾಗಿ ಕಾಣಬರುವುದು ಮಾತ್ರವಲ್ಲ, ಇಡೀ ವಿಶ್ವದ ಅಂತರ್ಯಾಮಿಯಾಗಿಯೂ ಕಂಗೊಳಿಸುವನು. ಸಗುಣ ಈಶ್ವರನೇ ಈ ವಿಶ್ವದ ಅಂತರ್ಯಾಮಿಯೂ ಅತೀತನೂ ಆಗಿ ಕಂಡುಬರುವ ವಿಶ್ವಾತ್ಮಭಾವದ ಸಾಕ್ಷಾತ್ಕಾರವೇ ಭಕ್ತಿಯ ಅತ್ಯುನ್ನತ ಸಾರ್ಥಕತೆಯಾಗಿದೆ.

ಇದು ಪರಮಪುರುಷಾರ್ಥ ಸಿದ್ಧಿಯ ಸ್ಥಿತಿಯಾಗಿರುವುದರಿಂದ ವ್ಯಾವಹಾರಿಕ ಜಗತ್ತಿನ ದ್ವಂದ್ವಗಳಾದ ಒಳಿತು–ಕೆಡುಕುಗಳನ್ನು, ಸಂತಸ–ಸಂಕಷ್ಟಗಳನ್ನು ಮೀರಿಹೋಗುವುದು. ಹೀಗಾಗಿ ಇದು ಅತಿಕ್ರಿಯಾಶೀಲ ಮಿದುಳಿನ ಸ್ವಪ್ರೇರಿತ ಭ್ರಮೆಗಳಿಗಿಂತ ಭಿನ್ನವಾಗಿದೆ. ಅಹಂಕಾರದ ಪರಿಪೂರ್ಣ ವಿನಾಶ ಮತ್ತು ಸ್ವಾರ್ಥದ ಸಂಕೋಲೆಗಳಿಂದ ಸಂಪೂರ್ಣ ಸ್ವಾತಂತ್ರ್ಯ – ಇವುಗಳೇ ಇದರ ಪ್ರಮಾಣಗಳು. ಪರಮಾತ್ಮನಲ್ಲಿ ಮಾಡುವ ಗುಣಾತೀತವಾದ ಈ ಪರಮ ನಿಸ್ವಾರ್ಥ ಪ್ರೇಮವನ್ನೇ ಭಾಗವತವು **ನಿರ್ಗುಣ ಭಕ್ತಿ** ಎಂದು ಕರೆಯುತ್ತದೆ. ಇದರ ಮಹೋನ್ನತ ಅನುಭೂತಿಯನ್ನು ಸ್ವಾಮೀಜಿ ಹೀಗೆ ವಿವರಿಸುತ್ತಾರೆ:

"ನಾವೆಲ್ಲ ನಮ್ಮ ಮೇಲಿನ ಪ್ರೇಮದಿಂದ ಆರಂಭಿಸುವೆವು. ನಮ್ಮ ಕ್ಷುದ್ರ ಮತ್ತು ಯುಕ್ತವಲ್ಲದ ಅಹಂಕಾರದ ಅಧೀನದಲ್ಲಿ ಪ್ರೇಮ ಕೂಡ ಸ್ವಾರ್ಥಮಯವಾಗುವುದು. ಅಂತೂ ಇಂತೂ ಕಡೆಗೆ ಪ್ರೇಮದ ಪರಿಪೂರ್ಣ ಜ್ಯೋತಿ ಪ್ರಜ್ವಲಿಸತೊಡಗುವುದು. ಆ ಕಾಂತಿಯಲ್ಲಿ ಈ ಅಲ್ಪಾತ್ಮವು ಅನಂತಾತ್ಮದಲ್ಲಿ ಏಕೀಭಾವವನ್ನು ಕಂಡುಕೊಂಡ ಹಾಗೆ ಭಾಸವಾಗುವುದು. ಮಾನವನೇ ಆ ಪ್ರೇಮಜ್ಯೋತಿಯ ಸಾನ್ನಿಧ್ಯದಲ್ಲಿ ರೂಪಾಂತರ ಹೊಂದುವನು. ಆ ಸ್ಥಿತಿಯಲ್ಲಿ ಪ್ರೇಮ, ಪ್ರೇಮಿ ಮತ್ತು ಪ್ರೇಮದ ವಿಷಯ ಇವೆಲ್ಲವೂ ಒಂದೇ ಎನ್ನುವ ಸುಂದರ ಹಾಗೂ ಸ್ಫೂರ್ತಿದಾಯಕ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವನು" (*ಭಕ್ತಿಯೋಗ*, ಪುಟ ೮೪).

ಈ ಆತ್ಯಂತಿಕ ಆಧ್ಯಾತ್ಮಿಕ ಅನುಭೂತಿಯಲ್ಲಿ ಜೀವಿಯು ದಿವ್ಯಾನಂದದ ಅಗಣಿತ ಮಾಧುರ್ಯದಲ್ಲಿ ಲೀನವಾಗಿ ಹೋಗುತ್ತಾನೆ. ಇದರ ನೈಜ ಸ್ವರೂಪ ಅಂದರೆ ಇದು ದ್ವೈತವೋ ಅದ್ವೈತವೋ ಎನ್ನುವ ತಾತ್ತ್ವಿಕ ಪ್ರಶ್ನೆಗಳು ಇಲ್ಲಿ ಅಸಂಗತವಾಗಿಬಿಡುತ್ತವೆ. ಸ್ವಾಮಿ ವಿವೇಕಾನಂದರು ಸ್ವತಃ ಅತ್ಯುನ್ನತ ದರ್ಜೆಯ ದಾರ್ಶನಿಕರು, ಭಗವಂತನನ್ನು ಹಾಗೂ ಮಾನವತೆಯನ್ನು ಸಮಾನವಾಗಿ ಪ್ರೀತಿಸಿದ ಪರಿಪೂರ್ಣ ಭಕ್ತರು. ಹೀಗಾಗಿ ಅವರ ಹೇಳಿಕೆಗಳಲ್ಲಿ ನಿರ್ವಿವಾದವಾದ ಅನುಭೂತಿಕ ನಿಸ್ಸಂದಿಗ್ಧತೆಯನ್ನು ಕಾಣಬಹುದು.

> **ಭಕ್ತನಿಗೆ ಭಗವಂತ ಪ್ರೇಮಮಯ. ಅವನೇ ಪ್ರೇಮದ ಪರಮಾದರ್ಶ. ಭಕ್ತನಿಗೆ ಇಷ್ಟೇ ಸಾಕು. ಭಗವಂತ ಪ್ರೇಮಮಯನಾಗಿರುವುದರಿಂದ ಸ್ವಯಂ ವೇದ್ಯ. ಇವನನ್ನು ತೋರಲು ಬೇರೆ ಯಾವ ಕಾರಣಗಳೂ ಬೇಕಾಗಿಲ್ಲ. ಅನ್ಯಧರ್ಮದಲ್ಲಿ ಬರುವ ನ್ಯಾಯಾಧೀಶನಂತಹ ದೇವರನ್ನು ಸಮರ್ಥಿಸಲು ಸಾಕಷ್ಟು ಕಾರಣಗಳು ಬೇಕು. ಆದರೆ ಭಕ್ತನಾದರೋ ಇಂತಹ ದೇವರನ್ನು ಚಿಂತಿಸುವುದೇ ಇಲ್ಲ. ಭಕ್ತನಿಗೆ ಭಗವಂಥ ಪ್ರೇಮಸ್ವರೂಪದಂತೆ ಇರುವನು.**
>
> – ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದರ ಭಕ್ತಿತತ್ತ್ವವನ್ನು ಹೀಗೆ ಸಂಕ್ಷೇಪಗೊಳಿಸಬಹುದು:

೧. ಭಕ್ತಿ ಎನ್ನುವುದು ಜ್ಞಾನವಿಚಾರದ ದೃಷ್ಟಿಯಿಂದ, ಜೀವಿ ಮತ್ತು ಸಗುಣ ಈಶ್ವರ – ಇವರ ನಡುವಣ 'ನಾನು–ನೀನು' ಸಂಬಂಧದಿಂದ ಉದ್ಭವವಾದ ಪ್ರಜ್ಞೆಯ ವಿಸ್ತರಣವಾಗಿದೆ. ಇದು ಉತ್ಕಟ ಪ್ರೇಮವಾಗಿ ಪ್ರೌಢಿಮೆಯನ್ನು ಪಡೆದುಕೊಂಡು ಜೀವಿ ಮತ್ತು ಸಗುಣ ಈಶ್ವರರ ಆತ್ಯಂತಿಕ ಮಿಲನದಲ್ಲಿ ಪರ್ಯವಸಾನವಾಗುತ್ತದೆ.

೨. ಸಗುಣ ಈಶ್ವರನು ಭಕ್ತನ ಆರಾಧನಾ ಧ್ಯೇಯವಾಗಿದ್ದಾನೆ. ಊಹೆಯ ದೃಷ್ಟಿಯಿಂದ ನೋಡುವುದಾದರೆ, ಮಾನವ ಮನಸ್ಸು ಗ್ರಹಿಸಬಲ್ಲ ನಿರ್ಗುಣ ನಿರಪೇಕ್ಷ ತತ್ತ್ವದ ಅತ್ಯಂತ ಉತ್ಕೃಷ್ಟ ಸ್ವರೂಪವೇ ಇವನು. ಅನುಭಾವಿಕ ದೃಷ್ಟಿಯಿಂದ ನೋಡುವುದಾದರೆ, ಭಕ್ತನ ಪ್ರಜ್ಞೆಯಲ್ಲಿ ಅಂತರ್ಗತವಾದ ಪ್ರೇಮದ ಪರಾಕಾಷ್ಠತೆಯು ವಿಶ್ವಾತ್ಮವಾಗಿ ಮಾರ್ಪಡುವ ಪರಿವರ್ತನೆಯೇ ಈ ಸಗುಣ ಈಶ್ವರ.

೩. ಈ ಸಗುಣ ಈಶ್ವರನನ್ನು, ಸಾಂಪ್ರದಾಯಿಕ ಆಚಾರ್ಯರಂತೆ, ಶಿವ, ವಿಷ್ಣು, ದೇವಿ ಅಥವಾ ಕೃಷ್ಣ ಮುಂತಾದ ದೇವತಾರೂಪಗಳೊಡನೆ ತಾದಾತ್ಮ್ಯಗೊಳಿಸುವ ಪ್ರಯತ್ನವನ್ನು ಮಾಡಲಾಗಿಲ್ಲ ಹಾಗೂ ಅವತಾರಗಳು ಮತ್ತು ಪರಮ ಭಗವತ್ತತ್ತ್ವದ ನಡುವಣ ನಿಖರವಾದ ದೈವಶಾಸ್ತ್ರೀಯ ಸಂಬಂಧವನ್ನೂ ಮತೀಯ ದೃಷ್ಟಿಯಿಂದ ಪ್ರತಿಪಾದಿಸಿಲ್ಲ.

೪. ಭಕ್ತನ ದೃಷ್ಟಿಕೋನದಿಂದ ಸ್ವಾಮೀಜಿ, ಪ್ರಪಂಚದ ಅಸ್ಥಿರತೆಯ ಬಗ್ಗೆಯೂ, ಪ್ರಾಪಂಚಿಕ ಸುಖದ ಅಸತ್ಯತೆಯ ಬಗ್ಗೆಯೂ ಹೇಳುತ್ತಾರೆ. ಸ್ಫೋಟ ಸಿದ್ಧಾಂತವನ್ನು ಕುರಿತು ವಿವರಿಸುವಾಗ ಅವರು, ಸೃಷ್ಟಿಯ ಆದಿಯಲ್ಲಿ ಈಶ್ವರನು ಸಂಕೇತ ರೂಪದಲ್ಲಿ (ಅದನ್ನು ಅವರು ಮಹತ್ ತತ್ತ್ವಕ್ಕೆ ಸಮಾನವೆಂದು ಹೇಳುತ್ತಾರೆ) ಸಂಕುಚಿತಗೊಂಡನೆಂದೂ ಮತ್ತು ತದನಂತರ